**ಸಾಕ್ಷಿಯನ್ನು ದಿಃ 01.07.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ಎಸ್.ಎಸ್ ವಕೀಲರಿಂದಃ-**

ಈ ಕೇಸಿನಲ್ಲಿ ಲಿಖಿತ ಹೇಳಿಕೆ ಬರೆಸಿ ಹಾಕಲು ನಮ್ಮ ವಕೀರಿಗೆ ನಾನೆ ಮಾಹಿತಿಯನ್ನು ನೀಡಿರುತ್ತೇನೆ. ದಾವಾ ಸ್ವತ್ತುಗಳು ವಾದಿಯರಿಗೆ ಸೇರಿದ್ದು, 35 ವರ್ಷಕ್ಕೂ ಹೆಚ್ಚಿನ ಕಾಲ ನಾವು ಸದರಿ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದರಿಂದ ಪ್ರತಿಕೂಲ ಸ್ವಾಧೀನ ಹಕ್ಕು ಇದೆ ಎಂದು ಲಿಖಿತ ಹೇಳಿಕೆಯಲ್ಲಿ ಹೇಳಿ ಬರೆಸಿಲ್ಲ ಅದರೆ ನಾವೆ ಸ್ವಾಧೀನದಲ್ಲಿ ಇದ್ದೆವೆ. ಒಂದು ವೇಳೆ ಪ್ರತಿಕೂಲ ಸ್ವಾಧೀನ ಹಕ್ಕು ಇದೆ ಎಂದು ಬರೆಸದಿದ್ದರೆ ಅದು ಸುಳ್ಳು ಎಂದರೆ ಸರಿ.ದಾವಾ ಸ್ವತ್ತಿನದಲ್ಲಿ 35 ವರ್ಷಗಳಿಂದ ಸ್ವಾಧೀನದಲ್ಲಿ ಇರುವ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆ. ಆ ರೀತಿ ಯಾವುದೆ ದಾಖಲೆ ಹಾಜರು ಪಡಿಸದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 35 ವರ್ಷಗಳಿಂದ ನಾನು ಕಂದಾಯ ಕಟ್ಟಿದ್ದೇನೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. 3 ಸೈಟ್ ಮತ್ತು 1 ಗೊಡೋನ್ ಇರುವ ಜಾಗದ ಮೇಲೆ ಈ ದಾವೆ ಹಾಕಿದ್ದಾರೆ ಎಂದರೆ ಸರಿ. ಗೊಡೋನ್ ಇರುವ ಜಾಗ ಅಸೆಸ್ ಮೆಂಟ್ ನನಗೆ ಗೊತ್ತಿಲ್ಲ. 3 ಸೈಟ್ ಗಳ ಅಸೆಸ್ ಮೆಂಟ್ ನಂಬರ್ ನನಗೆ ಗೊತ್ತಿಲ್ಲ. ಅದೆ ರೀತಿ 3 ಸೈಟ್ ಗಳು ಮತ್ತು ಮಂಗಳೂರು ಹಂಚಿನ ಗೊಡೋನ್ ಗಳ ಚಕ್ಕುಬಂದಿ ನನಗೆ ಗೊತ್ತಿಲ್ಲ. ನನ್ನ ತಾಯಿ ಹೆಸರು ಜಮುನಾ ಜ್ಞಾನದೇವ ಎಂದರೆ ಸರಿ. ನನ್ನ ತಾಯಿ ಸರ್ಕಾರ ಮತ್ತು ಪ್ರತಿವಾದಿಗಳ ಮೇಲೆ ಹುಣಸೂರಿನ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಓಸ್. ನಂ. 229/2018 ಹಾಕಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಈಗ ತೀರಿಕೊಂಡಿದ್ದಾರೆ. ಯಾವ ಆಸ್ತಿ ಮೇಲೆ ಕೇಸ್ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ದಾವಾದ ಎ ಷಡ್ಯೂಲ್ ಆಸ್ತಿಯ ಮೇಲೆ ನಿರ್ದಿಷ್ಣ ಪರಿಹಾರ ಕೋರಿ ದಾವೆ ಹಾಕಿದ್ದರು ಎಂದರೆ ನನಗೆ

ಗೊತ್ತಿಲ್ಲ. 1983 ರಲ್ಲಿ ವಾದಿಗಳ ತಂದೆ ಕ್ರಯದ ಕರಾರು ಬರೆದುಕೊಟ್ಟಿದ್ದರು ಅದನ್ನು 35 ವರ್ಷಗಳ ನಂತರ ಕ್ರಯ ಬರೆದುಕೊಡಿ ಎಯಿ ನಿರ್ದಿಷ್ಟ ಪರಿಹಾರ ಕೋರಿ ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ನಡೆಸುತ್ತಿರುವ ವಕೀಲರೆ ಆ ದಾವೆಯನ್ನೂ ಸಹ ನಡೆಸುತ್ತಿದ್ದಾರೆ ಎಂದರೆ ಸರಿ. ನಾನು ಯಾವುದೆ ಕಾಲಕ್ಕೂ ಬಿ. ಷಡ್ಯೂಲ್ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

ಮಂಗಳೂರು ಹಂಚಿನ ಮನೆ ಅಲ್ಲ ಅದು ಗೊಡೋನ್ ಎಂದರೆ ಸರಿ. ಅಲ್ಲಿ ಕೂಯ್ದು ಮರಗಳನ್ನು ಸ್ಟಾಕ್ ಮಾಡುವುದು ಎಂದರೆ ಸರಿ. ಸದರಿ ಜಾಗವನ್ನು ಬಿಟ್ಟುಕೊಡುವಂತೆ 3 ವಾದಿಯರು ಕೇಸು ಹಾಕಿರುತ್ತಾರೆ ಎಂದು ಅದು ಸುಳ್ಳು ಎನ್ನುತ್ತಾರೆ. ದಾವಾ ಬಿ. ಷಡ್ಯೂಲ್ ಸ್ವತ್ತು ವಾದಿಯವರು ಸ್ವಾಧೀನದಲ್ಲಿ ಇದ್ದು ಸದರಿ ಜಾಗದಲ್ಲಿ ಟಿಂಬರ್ ಮರಗಳನ್ನು ಇಡುತ್ತಿರುವುದು ಎಂದರೆ ಸರಿಯಲ್ಲ, ನಾವೆ ಅದನ್ನು ಉಪಯೋಗಿಸಿಕೊಳ್ಳುತ್ತಿರುವುದು ಎನ್ನುತ್ತಾರೆ. ವಾದಿಯವರು ನಮ್ಮ ಮೇಲೆ ಬೇಕಾದಷ್ಟ ಸಲ ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿ. ಪೊಲೀಸರು ಪ್ರತಿ ಸಲ ಬಂದು ಜಾಗವನ್ನು ಖುಲ್ಲಾ ಮಾಡಿಸುತ್ತಿದ್ದರು, ಪುನಃ ನಾನು ಅಲ್ಲಿಯೆ ಸ್ವಾಧೀನ ಇರುತ್ತಿದ್ದೆ ಎಂದರೆ ಸರಿಯಲ್ಲ.

ವಾದಿಯವರು ಮರದ ವ್ಯವಹಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಪುನಃ ಮರದ ವ್ಯವಹಾರ ಮಾಡುತ್ತಿರಬಹುದು ಎನ್ನುತ್ತಾರೆ. ಹಾಗಾಗಿ ಗೊಡೋನ್ ನ ಅವಶ್ಯಕತೆ ಬಂದ ಕಾರಣ ಬಿಟ್ಟುಕೊಡುವಂತೆ ನನಗೆ ಕೇಳಿದ್ದರು ಎಂದರೆ ನನ್ನ ತಂದೆ ಕಾಲದಿಂದಲೂ ಸ್ವಾಧೀನದಲ್ಲಿ ಇದ್ದೆ ಎನ್ನುತ್ತಾರೆ. ಗೊಡೋನ್ ಮಾಡಲು ನಾನು ಲೈಸನ್ಸ್ ತೆಗೆದುಕೊಂಡಿಲ್ಲ, ಅದರೆ ಅದು ತಂದೆ ಕಾಲದಲ್ಲಿಯೂ ಇದೆ. ಗೋಡೋನ್ ಅನ್ನು ನಾನು ಹುಟ್ಟುವ ಮೊದಲೆ ವಾದಿಯರ ತಂದೆ ಕಟ್ಟಿದ್ದರು ಎಂದರೆ ಸರಿಯಲ್ಲ, ನಮ್ಮ ತಂದೆ ಗೊಡೋನ್ ಕಟ್ಟಿದ್ದರು ಎನ್ನುತ್ತಾರೆ . ವಾದಿಯವರು ಏನೇಲ್ಲಾ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ

ದಾವಾ ಆಸ್ತಿಗಳ ಮೇಲೆ ನನಗೆ ಹಕ್ಕು ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಕೊಟ್ಟಿದ್ದೇನೆ. ಆದರೆ ಏನು ದಾಖಲೆ ಕೊಟ್ಟಿದ್ದೇನೆ ಎಂದು ಗೊತ್ತಿಲ್ಲ. ದಾವಾ ಜಮೀನು ವಾದಿಗಳ ಅಸ್ತಿ ಆಗಿದ್ದು, ಅದನ್ನು ಬಿಟ್ಟುಕೊಡಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಿ. ಷಡ್ಯೂಲ್ ಸ್ವತ್ತಿನಲ್ಲಿ ವಾದಿಯರೆ ಸ್ವಾಧೀನದಲ್ಲಿ ಇದ್ದು ಯಾವ ಕಾಲಕ್ಕೂ ನಾವು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.